

ಬೋಡಾ ರಾಮಣ್ಣ



ಮಂಜೂರ್ ಅಹ್ಮದ್



ಎಂ.ಆರ್. ಬುದ್ಧಿವಂತ ಶೆಟ್ಟಿ



ಫೌಜಿಯಾ ಚೌದರಿ

ಊರು ಪರಿಸರದ ಉರ್ದು ಕನ್ನಡ ಸಾಮ್ರಾಜ್ಯದ ಸಾಂಸ್ಕೃತಿಕ ಸಮನ್ವಯತೆ ಕುರಿತು.

ಅಲ್ಲಿರುವವರು ಮುಕ್ಕಾಲುಪಾಲು ಆಗರ್ಭ ಬಡತನದ ಮುಸ್ಲಿಮರು. ಅಂತಹ ಆಗರ್ಭ ಬಡತನದ ನಡುವೆ ಓಣಿಗೋರ್ವ ಆಗರ್ಭ ಸಿರಿತನದ ಉರ್ದು ಗಝಲ್ ಘಮಲು ಚೆಲ್ಲುವ ಆಶುಕವಿಗಳು. ಇತಿಹಾಸದ ಉದ್ದಕ್ಕೂ ಅಲ್ಲಿನ ಸಾಮಾಜಿಕ ಬಂಧುತ್ವ, ಭಾಷಾ ಭಾವೈಕ್ಯಕ್ಕೆ ಮುಕ್ಕಾಗಲೀ ಮುಪ್ಪಾಗಲೀ ಇಲ್ಲವೇ ಇಲ್ಲ. ಹಿಂದೂ ಮುಸ್ಲಿಮರೆಂಬ ಧರ್ಮಭೇದಕ್ಕೆ ಬದಲು ಕನ್ನಡ ಉರ್ದು ಪ್ರಭೇದಗಳ ಸಾಂಸ್ಕೃತಿಕ ಅಸ್ಮಿತೆ. ಉರ್ದು ಭಾಷಿಕ ಮುಸ್ಲಿಮರಷ್ಟೇ ಸಾಮರ್ಥ್ಯದ ಕನ್ನಡ ಮಾತೃಭಾಷೆಯ ಹಿಂದೂಗಳು ಉರ್ದುವಿನ ಪಂಡಿತರು. ಕನ್ನಡದಲ್ಲಿ ಫಕೀರಪ್ರಜ್ಞೆಯ ಸೂಫಿ ತತ್ವಾನುಭಾವದಂತಹ ಸಾಹಿತ್ಯ ರಚಿಸುವ ಮುಸ್ಲಿಮರು ಕೆಲವರು. ಹೀಗೆ ಇಲ್ಲಿನ ಉರ್ದು ಮತ್ತು ಕನ್ನಡಗಳೆರಡರದು ಬೇರ್ಪಡಿಸಲಾಗದ ಗಂಡಭೇರುಂಡ ಸಂಬಂಧ.

ತಿಮ್ಮಾಪುರದವರಾದ ಡಾ. ಕೆ. ಮುದ್ದಣ್ಣ ವೃತ್ತಿಯಿಂದ ಸರಕಾರಿ ವೈದ್ಯರು. ಅವರು ಉರ್ದು ಸಾಹಿತ್ಯದ ವಿದ್ವಾಂಸರು. ಇಂಗ್ಲಿಷ್, ಹಿಂದಿ, ಸಂಸ್ಕೃತ ಸಾಹಿತ್ಯದ ಕೃಷಿಕರು. ಪ್ರಬುದ್ಧ ವಿಮರ್ಶಕರು. ಹಾಗೆಯೇ ರೇವಣಸಿದ್ದಯ್ಯ ಸ್ವಾಮಿ, ಮಹಾದೇವಪ್ಪ ಕಡೇಚೂರು, ಚಿದಾನಂದ ಭಟ್, ಪ್ರಹ್ಲಾದ ರಾವ್ ಕುಳಗೇರಿ, ಪ್ರಭುರಾವ್ ಮಾಸ್ತರರು. ಅಂದಹಾಗೆ, ಕುರಾನ್ ಗ್ರಂಥಗಳಲ್ಲಿನ ಧಾರ್ಮಿಕ ಕ್ಲಿಷ್ಟ ಪದಗಳು ಮುಸ್ಲಿಮರಿಗೇ ಅರ್ಥವಾಗದಿದ್ದಾಗ ಪ್ರಭುರಾವ್ ಮಾಸ್ತರರ ಬಳಿಬಂದು ಬಗೆಹರಿಸಿಕೊಳ್ಳುತ್ತಿದ್ದರು.

ಈ ಊರಲ್ಲಿ ಎಂಬತ್ತು ವರ್ಷಗಳ ಹಿಂದೆಯೇ (1943) ಕನ್ನಡ ಸಾಹಿತ್ಯ ಸಂಘವನ್ನು ಕಟ್ಟಿ ಬೆಳೆಸಿ ಒಂದೆರಡು ಅವಧಿಗೆ ಮುಸ್ಲಿಮರನ್ನೇ ಸಂಘದ ಕಾರ್ಯದರ್ಶಿ ಮಾಡಿದವರಿದ್ದಾರೆ. ಅವರೆಂದರೆ ವಣಿಕ ಎಂ.ಆರ್. ಬುದ್ಧಿವಂತ ಶೆಟ್ಟಿ ಮತ್ತು ಸ್ವಾತಂತ್ರ್ಯ ಪೂರ್ವದ ಮುಸ್ಲಿಮರ ನಂಬಿಕೆಗೆ ಭಾಜನರಾದ ಅಪ್ಪಟ ಗಾಂಧೀವಾದಿ ಬೋಡಾ ರಾಮಣ್ಣ. ರಾಮಣ್ಣ ಹೆಸರಿನ ಕನ್ನಡ ಸಾಹಿತ್ಯ ಸಂಘದ ಸ್ಮಾರಕ ಭವನ ಮತ್ತು ಭವನದ ಮುಂದಿರುವ ಬುದ್ಧಿವಂತ ಶೆಟ್ಟರ ಪುತ್ಥಳಿ ಅದೆಲ್ಲದಕೆ ಸಾಕ್ಷಿಪ್ರಜ್ಞೆಯಾಗಿವೆ. ಅವರು ಕನ್ನಡದ ಜೊತೆಗೆ ಉರ್ದು ಸಾಹಿತ್ಯದ ಅನನ್ಯ ಪ್ರೀತಿ ಮೆರೆದವರು. ಕನ್ನಡ ಸಾಹಿತ್ಯ ಸಂಘ ಅಭೂತಪೂರ್ವ ಎಂಬಂತೆ ನವರಾತ್ರಿ ಉತ್ಸವಗಳನ್ನು ಆಚರಿಸುತ್ತಾ ಬಂದಿದೆ. ದ.ರಾ. ಬೇಂದ್ರೆ, ಬಿ.ಎಂ. ಶ್ರೀಕಂಠಯ್ಯ, ವಿ. ಸೀತಾರಾಮಯ್ಯ, ಮಾಸ್ತಿ, ಅ.ನ. ಕೃಷ್ಣರಾಯ, ಹಾ.ಮಾ. ನಾಯಕ, ತ.ರಾ.ಸು. ಮುಂತಾದ ಅಗ್ರಗಣ್ಯ ಸಾಹಿತಿಗಳು ಕನ್ನಡ ಸಾಹಿತ್ಯ ಸಂಘದ ಕಾರ್ಯಕ್ರಮಗಳಿಗೆ ಆಗಮಿಸಿದ ದಾಖಲೆಗಳಿವೆ.



ತಿಮ್ಮಾಪುರದಲ್ಲಿ ಜನವರಿಯಲ್ಲಿ ನಡೆದ ಅಖಿಲ ಭಾರತ 'ಕುಲ್ ಹಿಂದ್ ಮುಶಾಯಿರಾ' (ಸಂಗ್ರಹ ಚಿತ್ರ)

ಈ ಊರಿನ ಸರಕಾರಿ ಮಾಧ್ಯಮಿಕ ಶಾಲೆಯ ಮಾರ್ತಾಂಡರಾವ್ ಮಲ್ಹಾರಿರಾವ್, ಮುದ್ದುರಂಗಾಚಾರ್ ಮಾಸ್ತರರು ಉರ್ದು ಮಾಧ್ಯಮದಲ್ಲೇ ವಿಜ್ಞಾನ, ಗಣಿತ, ಇತಿಹಾಸ, ಭೂಗೋಳ ಬೋಧಿಸಿದವರು. ಅದೇರೀತಿ ಸಂಸ್ಕೃತದ ಸ್ನಾತಕೋತ್ತರ ಪದವಿಯನ್ನು ತಿಮ್ಮಾಪುರದ ಬಷೀರ್ ಅಹ್ಮದ್ ಪ್ರಥಮ ದರ್ಜೆ ಪಡೆದು ಪಾಸಾದವರು.

ಸುರಪುರ ನಾಡು ಸಾಂಸ್ಕೃತಿಕ ಸಮನ್ವಯತೆಯ ನಿಡಿದಾದ ಪರಂಪರೆಯನ್ನೇ ಕನ್ನಡನಾಡಿಗೆ ನೀಡಿದೆ. ಅದರಲ್ಲೂ ವಿಶೇಷವಾಗಿ ಉರ್ದು ಕಾವ್ಯಲೋಕದ ಸಮೃದ್ಧ ಮಂಥನದಂತೆ 'ಮುಶಾಯಿರಾ' ಹಬ್ಬಗಳು ಜರುಗುತ್ತವೆ. ತಿಮ್ಮಾಪುರ–ರಂಗಂಪೇಟೆ ಅವಳಿ ಊರಲ್ಲಿ ರಾಷ್ಟ್ರೀಯ ಮಟ್ಟದ 'ಮುಶಾಯಿರಾ' ಎಂಬ ಗಝಲ್ ಪರಿಷೆಯ ಸಂಭ್ರಮ. ಅದು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ದಾಖಲಿಸಲೇಬೇಕಾದುದು. ಅದಕ್ಕೆಲ್ಲ ಹಿಂದಿನ ಶಾಸಕರಾಗಿದ್ದ ರಾಜಾ ಪಿಡ್ಡನಾಯಕ ಮತ್ತು ಮಾಜಿ ಸಚಿವ ರಾಜಾ ಮದನಗೋಪಾಲ ನಾಯಕರ ಯಥೇಚ್ಛ ಪ್ರೀತಿ, ಪ್ರೋತ್ಸಾಹ, ಉತ್ತೇಜನಗಳು ಕಾರಣವೆಂದು ಸ್ಥಳೀಯ ಹಿರಿಯ ಸಾಹಿತಿ ಬೂದಿಹಾಳ ಶಾಂತಪ್ಪ ಅಂಬೋಣ.

ಈ ಪುಟ್ಟ ಊರಿಗೆ ಹತ್ತಿರದ ಹೈದರಾಬಾದ್, ದೂರದ ದೆಹಲಿ, ಮುಂಬಯಿ, ಜಲಂಧರ್, ಕಾನ್ಪುರ, ಉತ್ತರ ಪ್ರದೇಶಗಳಿಂದ ಕವಿಗಳು, ಕವಯಿತ್ರಿಯರು ಆಗಮಿಸಿ ಇಡೀ ರಾತ್ರಿ 'ಮುಶಾಯಿರಾ' (ಕವಿ ಸಮ್ಮೇಳನ)ದಲ್ಲಿ ಸಂಭ್ರಮಿಸುತ್ತಾರೆ. ಅಲ್ಲಿ ಭಾಷಣಕ್ಕೆ ಅವಕಾಶವಿಲ್ಲ. ಪರಂತು ಮುಶಾಯಿರಾ ನಿರೂಪಣೆ ಮಾಡುವುದು ಪ್ರತಿಷ್ಠೆಯ ವಿಷಯ. ದೆಹಲಿಯ ಅಭಿಜಾತ ಉರ್ದುವಿನಿಂದ ಹಿಡಿದು, ತಿಮ್ಮಾಪುರದ ದೇಸಿಯ ದಖನಿ ಉರ್ದು ಗಝಲ್, ಶಾಯರಿಗೂ ಅಲ್ಲಿ ಅವಕಾಶ. ವಿಶೇಷವೆಂದರೆ, ಇದೇ ಊರಿನ ಮಂಜೂರ್ ಅಹ್ಮದ್ ತನಹಾ ತಿಮ್ಮಾಪೂರಿ ಮತ್ತು ಮುಬಾರಕ್ ಅಹ್ಮದ್ ಏಜಾಜ್ ಅವರು ಅಂತರರಾಷ್ಟ್ರೀಯ ಖ್ಯಾತಿ ಪಡೆದ ಉರ್ದುಕವಿಗಳು. ಏಜಾಜ್ (ಪವಾಡ) ಕಾವ್ಯನಾಮದ ಮುಬಾರಕ್ ಅಹ್ಮದರದು ಅಜಮಾಸು ಹತ್ತು ಸಾವಿರದಷ್ಟು ಗಝಲ್ ರಚಿಸಿದ ಹೆಗ್ಗಳಿಕೆ.

ತನಹಾ (ಏಕಾಂಗಿ) ಕಾವ್ಯನಾಮದ ಮಂಜೂರ್